ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂಖ್ಯೆ:ವಿವಾದ:118/2014-15 ದಿ:29-09-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ
ಮುದೇನೂರು ಗ್ರಾಮ, ಸಿರುಗುಪ್ಪ ತಾಲೂಕ
2) ಸಿದ್ದ ಮಲ್ಲನಗೌಡ ತಂದೆ: ಅಯ್ಯನಗೌಡ
ಮುದೇನೂರು ಗ್ರಾಮ, ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಗೌರಮ್ಮ ಗಂಡ: ಲೇಟ್ ವೀರಬಸವನಗೌಡ
ಮುದೇನೂರುಗ್ರಾಮ, ಸಿರುಗುಪ್ಪ ತಾಲೂಕ
(ವಕೀಲರು: ವೀರೇಶಗೌಡ ಸಿರುಗುಪ್ಪ )

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ವಹಿವಾಟು ಸಂಖ್ಯೆ: |
|---|---|---|---|---|
| ಮುದೇನೂರು ಗ್ರಾಮ | 96/B3 | 2-30 | H- 77/2011-12 | 87/2011-12 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಮುದೇನೂರು ಗ್ರಾಮದ ಸ.ನಂ.96/B3 ವಿಸ್ತೀರ್ಣ 2-30 ಎಕರೆ** ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-06645/2011-12 Dt.24-02-2012** ರ ಖರೀದಿಪತ್ರ ಪ್ರಕಾರ **ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ** ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ **ಗೌರಮ್ಮ ಗಂಡ: ಲೇಟ್ ವೀರ ಬಸವನಗೌಡ, ಮುದೇನೂರು ಗ್ರಾಮ ಇವರು ದಿ: 28-04-2012** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-08-2015, 21-10-2015, 28-03-2016, 13-05-2016, 10-06-2016, 19-08-2016, 26-08-2016 ಮತ್ತು 23-9-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ ಲೇಟ್, ಮುದೇನೂರು ಗ್ರಾಮ, ಸಿರುಗುಪ್ಪ ತಾಲೂಕ ಇವರು ಮುದೇನೂರು ಗ್ರಾಮದ ಸ.ನಂ.96/B3 ವಿಸ್ತೀರ್ಣ 2-30 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: SRG-1-06645/2011-12 Dt.24-02-2012 ರ ಖರೀದಿ ಪತ್ರ ಪ್ರಕಾರ ಸಿದ್ದ ಮಲ್ಲನಗೌಡ ತಂದೆ: ದಿ: ವೀರ ಬಸವನಗೌಡ, ಮುದೇನೂರು ಗ್ರಾಮ ಇವರಿಂದ ಗಾಂಜಿ ಕರಿ ಯಲ್ಲಪ್ಪ ತಂದೆ: ಹೊನ್ನೂರಪ್ಪ ಇವರು ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ವಿನಾಕಾರಣ ಗೌರಮ್ಮ ಗಂಡ: ದಿ: ವೀರಬಸವನಗೌಡ ಇವರು ವಿನಾಕಾರಣ ನಿರಾಧಾರವಾಗಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣೆ ಸಂದರ್ಭದಲ್ಲಿ ಯಾವುದೇ ಪೂರಕ ದಾಖಲೆಗಳನ್ನಾಗಲೀ ಅಥವಾ ಲಿಖಿತ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ. ಕಾರಣ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: SRG-1-06645/2011-12 Dt.24-02-2012 ರ ಖರೀದಿ ಪತ್ರ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಗೌರಮ್ಮ ಗಂಡ:ವೀರಬಸವನಗೌಡ, ಮುದೇನೂರು ಗ್ರಾಮ ಇವರು ಮುದೇನೂರು ಗ್ರಾಮದ ಸ.ನಂ.96/B3 ವಿಸ್ತೀರ್ಣ 2-30 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: SRG-1-06645/2011-12 Dt.24-02-2012 ರ ಖರೀದಿಪತ್ರ ಪ್ರಕಾರ ಸಿದ್ದಮಲ್ಲನಗೌಡ ತಂದೆ: ದಿ:ವೀರಬಸವನಗೌಡ, ಮುದೇನೂರು ಗ್ರಾಮ ಇವರಿಂದ ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ ಇವರು ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ, ನಮಗೆ ಗೊತ್ತಿಲ್ಲದಹಾಗೆ ಮಾರಾಟ ಮಾಡಿರುತ್ತಾರೆ ಇದರಿಂದ ನಮ್ಮ ಕುಟುಂಬಕ್ಕೆ ಇರುವ ಆಸ್ತಿ ಎಲ್ಲವನ್ನೂ ಕಳೆದುಕೊಂಡಂತಾಗುತ್ತದೆ, ಯಾವುದೇ ಕಾರಣಕ್ಕೂ ಮುಟೇಷನ್ ಮಾಡಬಾರದೆಂದು ದಿ:28-04-2012 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ದಿ:14-08-2015 ರಂದು ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ. ಯಾವುದೇ ಪೂರಕ ದಾಖಲೆಗಳನ್ನಾಗಲೀ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ.

(ಕೆ.ವೀರೇಶ ಗೌಡ, ವಕೀಲರು, ಸಿರುಗುಪ್ಪ ಇವರು ದಿ:14-08-2015 ವಕಾಲತ್ತು ಹಾಕಿರುತ್ತಾರೆ. ಯಾವುದೇ ಲಿಖಿತ ಹೇಳಿಕೆಗಳನ್ನಾಗಲೀ ಅಥವಾ ಸಂಭಂದಪಟ್ಟ ದಾಖಲಾತಿಗಳನ್ನಾಗಲೀ ನೀಡಿರುವುದಿಲ್ಲ)

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸದರಿ ಮುದೇನೂರು ಗ್ರಾಮದ ಸ.ನಂ.96/B3 ವಿಸ್ತೀರ್ಣ 2-30 ಎಕರೆ ಜಮೀನು, ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: SRG-1-06645/2011-12 Dt.24-02-2012 ರ ಖರೀದಿ ಪತ್ರ ಪ್ರಕಾರ ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಮುದೇನೂರು ಗ್ರಾಮದ ಸ.ನಂ.96/B3 ವಿಸ್ತೀರ್ಣ2-30 ಎಕರೆ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿಪತ್ರ ನಂ: SRG-1-06645/2011-12 Dt.24-02-2012 ರ ಖರೀದಿ ಪತ್ರ ಪ್ರಕಾರ ಗಾಂಜಿ ಕರಿಯಲ್ಲಪ್ಪ ತಂದೆ: ಹೊನ್ನೂರಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:29-09-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು. ದಿ:..........

ಇದರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕೆ